ಸಾಕ್ಷಿಯನ್ನು ದಿನಾಂಕ 13-07-2023 ರಂದು ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ವಕೀಲರಿಂದಃ**

ನಮ್ಮ ಘರಾಣೆ ಮೂಲ ಪುರುಷ ಸಿದ್ದಪ್ಪ ಶಿವಪ್ಪ ನಾವಳ್ಳಿ ಎಂದರೆ ನಿಜ. ಅವರ ಪತ್ನಿ ಹೆಸರು ನಾಗಮ್ಮ ಎಂದರೆ ನಿಜ. ಅವರಿಗೆ ಶಿವಪ್ಪ, ದೇವಪ್ಪ, ಯಶೋಧಾ, ಗುರುಸಿದ್ದಪ್ಪ ಎಂಬ ನಾಲ್ಕು ಮಕ್ಕಳು ಎಂದರೆ ನಿಜ. ಶಿವಪ್ಪರವರು ಜೀವಂತವಿಲ್ಲ ಎಂದರೆ ನಿಜ. ಅವರ ಪತ್ನಿ ಮಹಾದೇವಿ ಎಂದರೆ ನಿಜ. ಶಿವಪ್ಪನ ಮಗನ ಹೆಸರು ಸಂತೋಷ ಎಂದರೆ ನಿಜ. ಇಷ್ಟು ಮಂದಿ ಹೊರತು ಸಿದ್ದಪ್ಪನ ಘರಾಣೆಯಲ್ಲಿ ಬೇರೆ ಕೋಪಾಸನರ್ಸ ಇಲ್ಲ ಎಂದರೆ ನಿಜ. ದಾವಾ ಆಸ್ತಿಗಳ ಚಕಬಂದಿ ಹೇಳಲು ಆಗುತ್ತದೆಯೇ ಎಂದು ಕೇಳಿದರೆ ಹೇಳಬಲ್ಲೆ ಎಂದು ನುಡಿಯುತ್ತೇನೆ. ದಾವಾಆಸ್ತಿಗಳೆಲ್ಲವೂ ನನ್ನ ತಂದೆ ಸಿದ್ದಪ್ಪರವರಿಗೆ ಪಾಲುವಾಟ್ನಿಯಲ್ಲಿ ಬಂದಿತ್ತು ಎಂದರೆ ನಿಜ. 3 ಕೂರಗಿ ಹೊಲ ಮತ್ತು ಒಂದು ಎಕರೆ 30 ಗುಂಟೆ ನನ್ನ ತಂದೆಗೆ ಹಿಸ್ಸೆಯಾಗಿ ಬಂದಿತ್ತು. ಒಟ್ಟು 13 ಎಕರೆ 30 ಗುಂಟೆ ಜಮೀನು ನನ್ನ ತಂದೆಗೆ ಹಿಸ್ಸೆಯಾಗಿ ಬಂದಿತ್ತೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಸದರಿ ಪೂರ್ತಿ ಸ್ವತ್ತನ್ನು ನನ್ನ ತಂದೆಯೇ ಕಬ್ಜಾವಹಿವಾಟು ಮಾಡಿಕೊಂಡು ಬರುತ್ತಿದ್ದರು ಎಂದರೆ ನಿಜ. ನನ್ನ ತಂದೆ ಯಾವ ಇಸ್ವಿಯಲ್ಲಿ ತೀರಿಕೊಂಡಿದ್ದು ಎಂದು ಹೇಳಲು ಗೊತ್ತಿಲ್ಲ. ಅವರು ತೀರಿಕೊಳ್ಳುವ ಮೊದಲು 4 ಎಕರೆ ಜಮೀನನ್ನು ತನ್ನ ಪತ್ನಿ ನಾಗಮ್ಮಳಿಗೆ ಭಕ್ಷಿಶ್ ಮಾಡಿದ್ದರು ಎಂದರೆ ನಿಜ. ನನ್ನ ತಂದೆ ಹಾಗೂ ಮಕ್ಕಳ ನಡುವೆ ಯಾವುದೇ ಪಾಲುವಾಟ್ನಿಯಾಗಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ತಂದೆ ಹಾಗೂ ದೊಡ್ಡಪ್ಪ ಪಾಲುವಾಟ್ನಿ ಮಾಡಿಕೊಳ್ಳುವ ಮೊದಲು 3 ಎಕರೆ 28 ಗುಂಟೆ ಜಮೀನು ಬಂಡಿವಾಡದಲ್ಲಿ ಇತ್ತು ಹಾಗೂ ಅದನ್ನು ನನ್ನ ತಂದೆ ಖರೀದಿಗೆ ಚೆನ್ನಬಸಪ್ಪ ಅದರಗುಂಚಿರವರಿಗೆ ಕೊಟ್ಟಿದ್ದರು. ಆ ಖರೀದಿ ಕೊಟ್ಟ ಬಗ್ಗೆ ನಮ್ಮ ಮನೆತನದಲ್ಲಿ ಯಾರದ್ದೂ ಕೂಡ ತಂಟೆ ತಕರಾರು ಇಲ್ಲ ಎಂದರೆ ನಿಜ. ನನ್ನ ತಂದೆ ತೀರಿಕೊಂಡ ನಂತರವೂ ನನ್ನ ತಂದೆಯ ವಾರಸುದಾರರ ನಡುವೆ ಪಾಲುವಾಟ್ನಿಯಾಗಿಲ್ಲ ಎಂದರೆ ಸರಿಯಲ್ಲ. ಯಾವ ಇಸ್ವಿಯಲ್ಲಿ ವಿವಾದಿತ ಪಾಲುವಾಟ್ನಿಯಾಯಿತು ಎಂದು ಕೇಳಿದರೆ ಹುಬ್ಬಳ್ಳಿಯಲ್ಲಿ ವಿದ್ಯಾನಗರದ ನೇಕಾ ಭವನದಲ್ಲಿ ವಾಟ್ನಿಯಾಗಿದ್ದು ಎಂದು ನುಡಿಯುತ್ತೇನೆ.

ಅದನ್ನು ನೊಂದ ಮಾಡಲಾಗಿದೆಯೇ ಎಂದು ಕೇಳಿದರೆ ನೊಂದ ಆಗಿದೆ ಎಂದು ನುಡಿಯುತ್ತೇನೆ. ಆ ಪಾಲುವಾಟ್ನಿ ಪತ್ರಕ್ಕೆ ಮಾಹಿತಿ ಯಾರು ಕೊಟ್ಟಿದ್ದು ಎಂದು ಕೇಳಿದರೆ ನನ್ನ ದೊಡ್ಡಪ್ಪನ ಮಗ ಬಸವರಾಜ ಭೀಮಪ್ಪ ನಾವಳ್ಳಿ ಹಾಗೂ ನನ್ನ ಮಾವ ಚೆನ್ನಬಸಪ್ಪ ಹನಮಂತಪ್ಪ ಅದರಗುಂಚಿರವರು ಮಾಹಿತಿ ನೀಡಿದ್ದರು ಎಂದು ನುಡಿಯುತ್ತೇನೆ. 2019 ನೇ ಇಸ್ವಿಯಲ್ಲಿ ಸದರಿ ಪಾಲುವಾಟ್ನಿ ಪತ್ರ ಆಗಿತ್ತು. ಅದರ ದಿನಾಂಕ ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಎಲ್ಲರನ್ನು ಕೇಳಿ ನಂತರವೇ ಪಾಲುವಾಟ್ನಿ ಮಾಡಲಾಗಿತ್ತು. ಆ ರೀತಿ ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ವಾರಸುದಾರರೆಲ್ಲರ ಹೆಸರು ಆರ್ ಟಿ ಸಿ., ಉತಾರಿನಲ್ಲಿ ದಾಖಲಾಗಿತ್ತು ಎಂದರೆ ನಿಜ. ದಾವಾ ಆಸ್ತಿ ಮೇಲೆ ವಾದಿಯ ಹೆಸರು ಇರುವುದರಿಂದ ಅದರ ಮೇಲೆ ಸಾಲ ತೆಗೆದುಕೊಳ್ಳುವುದು ಇದೆ ಹಾಗೂ ಭೋಜಾ ಕೂರಿಸುವುದು ಇದೆ ಎಂದು ವಾದಿಗೆ ಸುಳ್ಳು ಹೇಳಿ ಆಕೆಯನ್ನು ಕರೆಯಿಸಿ ದಾಖಲೆಯಲ್ಲಿ ಏನು ಬರೆದಿದೆ ಎಂದು ವಾದಿಗೆ ತಿಳಿಸದೇನೆ ವಿಭಾಗ ಪತ್ರವನ್ನು ನೊಂದಣಿ ಮಾಡಿಕೊಂಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯಲ್ಲಿ ಖಾತೆ ಬದಲಾವಣೆ ಸಮಯ ವಾದಿಗೆ ನೋಟಿಸು ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಅಧಿಕಾರಿಗಳನ್ನು ಮಿಲಾಪೆ ಮಾಡಿಕೊಂಡು ಖೊಟ್ಟಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯ ಗಮನಕ್ಕೆ ನೈಜ ವ್ಯವಹಾರ ಬರಬಾರದು ಎಂದು ಖಾತೆ ಬದಲಾವಣೆ ಸಮಯ ಕೂಡ ಆಕೆಗೆ ನೋಟಿಸ್ ಜಾರಿಯಾಗದಂತೆ ನೋಡಿಕೊಂಡು ಮುಚ್ಚುಮರೆ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಪಾಲುವಾಟ್ನಿಗೆ ಯಾವತ್ತೂ ಕೂಡ ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪಾಲುವಾಟ್ನಿ ಆಗುತ್ತದೆ ಎಂದು ಆಕೆಗೆ ಎಂದೂ ತಿಳಿಸಿಲ್ಲ ಎಂದರೆ ಸರಿಯಲ್ಲ.

ವಾದಿಯನ್ನು ಗದಗ ತಾಲೂಕಿನ ಅಂತೂರ ಬೆಂತೂರ ಗ್ರಾಮದ ನಿವಾಸಿ ಸುರೇಶ ಬಂಕದರವರಿಗೆ ಮದುವೆ ಮಾಡಿಕೊಟ್ಟಿರುವುದು ಎಂದರೆ ನಿಜ. ವಾದಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಮಗಳು ಇರುವುದು ಎಂದರೆ ನಿಜ. ವಾದಿಯ ಗಂಡ 10-15 ವರ್ಷದ ಹಿಂದೆ ತೀರಿಕೊಂಡಿದ್ದಾರೆ ಎಂದರೆ ನಿಜ. ವಾದಿಯ ಮಗಳನ್ನು 5 ನೇ ಪ್ರತಿವಾದಿ ಗುರುಸಿದ್ದಪ್ಪನಿಗೆ ಮದುವೆ ಮಾಡಿಕೊಟ್ಟಿರುವುದು ಎಂದರೆ ನಿಜ. 5 ನೇ ಪ್ರತಿವಾದಿಯು

ಪ್ರಜಾವಾಣಿ ದಿನಪತ್ರಿಕೆಯಲ್ಲಿ ಗ್ರಾಫಿಕ್ ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ನಿಜ. ಅವರು ಹುಬ್ಬಳ್ಳಿಯಲ್ಲಿ ಖಾಯಂ ತರೀಕೆಯಿಂದ ವಾಸಮಾಡುತ್ತಿದ್ದಾರೆ ಎಂದರೆ ಈಗ 2 ವರ್ಷದಿಂದ ಹುಬ್ಬಳ್ಳಿಯಲ್ಲಿ ವಾಸವಿರುವುದು ಎಂದು ನುಡಿಯುತ್ತೇನೆ. ಸದರಿ ಗುರುಸಿದ್ದಪ್ಪನೇ 1ನೇ ಪ್ರತಿವಾದಿ ನಾಗಮ್ಮಳನ್ನು ಪಾಲನೆ ಪೋಷಣೆ ಮಾಡುತ್ತಿರುವುದು ಎಂದರೆ ನಿಜ.

**ಮುಂದುವರೆದ ಪಾಟಿ ಸವಾಲಿಗೆ** ಕಾಲಾವಕಾಶ **ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.